

## ಆಕರ್ಷಕವಾಗಿ ಕಾಣಲು ಟಿಪ್ಸ್

- ನಮ್ಮ ಉಡುಪು, ಒಡವೆ ಎಲ್ಲವೂ ನಮ್ಮ ಆಸಕ್ತಿ, ಅಭಿರುಚಿ, ವ್ಯಕ್ತಿತ್ವ, ಸೌಂದರ್ಯದ ಪ್ರತಿಬಿಂಬ. ಸುಂದರವಾಗಿ ಕಾಣಲು ಆಧುನಿಕ ಉಡುಪು, ದುಬಾರಿ ಒಡವೆಗಳೇ ಬೇಕೆಂದೇನಿಲ್ಲ.
- ಕಾಲಕ್ಕೆ ಸರಿಹೊಂದುವಂತೆ, ಕಾರ್ಯಕ್ರಮಗಳ ಸಂದರ್ಭಕ್ಕೆ ತಕ್ಕಂತೆ ಉಡುಪುಗಳನ್ನು ಧರಿಸಿ.
- ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳುವಾಗ ಬಣ್ಣಗಳ ಬಗ್ಗೆ ಲಕ್ಷ್ಯವಿರಲಿ.
- ಕುರ್ತಿ, ಜೀನ್ಸ್ ಏನೇ ತೊಟ್ಟರೂ ನಿಮ್ಮ ದೇಹದ ಆಕಾರ, ಗಾತ್ರಕ್ಕೆ ಅನುಗುಣವಾಗಿರಲಿ.
- ಬಣ್ಣಗಳ ಆಯ್ಕೆ ಬಗ್ಗೆ ವಿಶೇಷ ಗಮನಹರಿಸಿ.
- ಫಿಟಿಂಗ್ಸ್ ಸರಿಯಾಗಿರುವ ಉಡುಗೆಯನ್ನೇ ತೊಟ್ಟುಕೊಳ್ಳಿ.
- ಮದುವೆ, ಮುಂಜಿಗಳಂತಹ ಶುಭ ಸಮಾರಂಭಗಳಿಗೆ ದೇಸಿ ಉಡುಪು, ಭಾರತೀಯ ಸಂಸ್ಕೃತಿಯ ಉಡುಪುಗಳನ್ನೇ ಬಳಸಿ.
- ಗೆಟ್ ಟುಗೆದರ್, ಸಂಜೆಯ ಪಾರ್ಟಿ, ಬರ್ತಡೇ ಸೆಲಬ್ರೇಷನ್‌. ಮುಂತಾದ ಸಮಾರಂಭಗಳಿಗೆ ಮಾರ್ಡನ್ ಉಡುಪು, ವಿದೇಶಿ ನೆಲೆಗಟ್ಟಿನ ಉಡುಗೆಗಳೂ ಸೂಕ್ತವೆನಿಸುತ್ತವೆ.
- ಉಡುಗೆಗೆ ತಕ್ಕ ಹಾಗೆ ಸರಳವಾಗಿ ಮೇಕಪ್ ಮಾಡಿಕೊಳ್ಳಿ.
- ಒಡವೆಗಳನ್ನು ಅತಿಯಾಗಿ ಹೇರಿಕೊಳ್ಳಬೇಡಿ. ಸಂದರ್ಭಕ್ಕೆ ತಕ್ಕಂತೆ ಆಭರಣಗಳನ್ನು ಧರಿಸಿ.
- ಉಡುಪಿಗೆ ಮ್ಯಾಚ್ ಆಗುವಂಥ ಬ್ಯಾಗ್, ಚಪ್ಪಲಿ, ಆ್ಯಕ್ಸೆಸರೀಸ್ ಬಳಕೆಯತ್ತ ಚಿತ್ತಹರಿಸಿ.
- ಆದಷ್ಟು ನಮ್ಮ ಸಂಸ್ಕೃತಿ ಬಿಂಬಿಸುವ ಉಡುಪು, ಒಡವೆಗಳನ್ನೇ ಬಳಸಿ. ಮಕ್ಕಳಿಗೂ ಈ ಕುರಿತು ಮಾಹಿತಿ ನೀಡಿ.

ಸೀಮಿತವಾಗಿದ್ದವು. ಇಂದು ವಿಸ್ತಾರವಾದ ಫ್ಯಾಷನ್ ಜಗತ್ತು ಇವೆಲ್ಲ ಟ್ರೆಂಡ್‌ಗಳ ಜೊತೆಗೆ ಫ್ಯಾಷನ್‌ನ ಹೊಸ ಹೊಳಹುಗಳನ್ನು ಮಾರುಕಟ್ಟೆಯಲ್ಲಿ ಪ್ರದರ್ಶಿಸಿ ಮನಗೆಲ್ಲುತ್ತಿದೆ. ಹೀಗಾಗಿ ಕಣ್ಣಿಗೊಪ್ಪುವ, ಮನಸ್ಸಿಗೊಪ್ಪುವ ವಿನ್ಯಾಸಗಳ ಉಡುಗೆಗಳ ಮಹಾಪೂರವೇ ಟ್ರೆಂಡ್ ಸೃಷ್ಟಿಸಿ ಸಖತ್ ಆಗಿ ಮಿಂಚುತ್ತಿವೆ.

ಆಂಗ್ಲೊ–ದೇಸಿ ಉಡುಪುಗಳು ಹೊಸ ಮಾದರಿಯವಾಗಿದ್ದು, ಪಾರ್ಟಿಗಳಿಗೆ, ಸಂಜೆಯ ಸಮಾರಂಭಗಳಿಗೆ, ಗೆಟ್ ಟುಗೆದರ್‌ಗಳಿಗೆ ಸೂಕ್ತವೆನಿಸಿವೆ. ಹೀಗಾಗಿ ಗ್ರಾಹಕರ ಮನದಾಳ ಅರಿತ ವಸ್ತ್ರವಿನ್ಯಾಸಕರು ಹಲವು ಆಯಾಮಗಳಿಂದ ಯೋಚಿಸಿ ಡಿಸೈನ್ ಮಾಡಬೇಕಾಗುತ್ತದೆ. ಕಾಲಕ್ಕೆ ತಕ್ಕಂತೆ, ಯುವತಿಯರ ಆಸಕ್ತಿಗೆ ಪೂರಕವಾದಂತೆ, ಫ್ಯಾಬ್ರಿಕ್, ಬಣ್ಣ, ಶೈಲಿ, ಉಡುಪುಗಳು ವಿಶೇಷವಾಗಿ ಅಪ್‌ಡೇಟ್ ಆಗಿ ಫ್ಯಾಷನ್ ಕ್ಷೇತ್ರದಲ್ಲಿ ಎವರ್‌ಗ್ರೀನ್ ಆಗಿ ಮಿಂಚಲು ಹಾತೊರೆಯುತ್ತಿದೆ.

### ಸಂಸ್ಕೃತಿಗಳ ಸಂಗಮ...

ವಿವಿಧ ಸ್ತರಗಳಲ್ಲಿ, ಕ್ಷೇತ್ರಗಳಲ್ಲಿ ದೇಸಿ–ವಿದೇಶಿ ಸಂಸ್ಕೃತಿ ಸಂಗಮ ಸೌಹಾರ್ದ ಬಾಂಧವ್ಯಕ್ಕೆ ನಾಂದಿ ಹಾಡುತ್ತವೆ. ಫ್ಯಾಷನ್, ಉಡುಪು ಒಡವೆಗಳ ವಿಚಾರದಲ್ಲೂ ಅಷ್ಟೆ. ಪಾಶ್ಚಾತ್ಯ ಸಂಸ್ಕೃತಿ ನಮ್ಮ ಸಂಸ್ಕೃತಿಯೊಂದಿಗೆ ಬ್ಲೆಂಡ್ ಆದಾಗ ಹೊಸದೊಂದು ಪರಂಪರೆಗೆ ಸ್ಪಂದಿಸಿದಂತೆಯೂ ಆಗುತ್ತದೆ. ನಮ್ಮ ಸಂಸ್ಕೃತಿಯನ್ನು, ಉಡುಪು ಪರಂಪರೆಯನ್ನು ವಿದೇಶಿಯರೂ ಅಳವಡಿಸಿಕೊಂಡಾಗ ಎರಡೂ ದೇಶಗಳ ನಡುವೆ 'ಫ್ಯಾಷನ್ ಕೊಂಡಿ' ಜೀವಂತವಾಗಿರಲು ಸಾಧ್ಯವಾಗುತ್ತದೆ.

ಆದರೆ ವಿಷಾದದ ಒಂದು ವಿಚಾರವೆಂದರೆ, ಇತ್ತೀಚಿನ ಕೆಲ ವರ್ಷಗಳಿಂದ ನಾವು ವಿದೇಶಿ ಸಂಸ್ಕೃತಿಗಳಿಗೆ ಮಾರುಹೋಗಿ ಪಾಶ್ಚಾತ್ಯ ಅನುಕರಣೆಯನ್ನೇ ಹೆಚ್ಚಾಗಿ ಮಾಡುತ್ತಿರುವುದು ಕಂಡುಬರುತ್ತಿದೆ. ಇದು ನಮ್ಮ ಫ್ಯಾಷನ್ ವಿಚಾರದಲ್ಲಿ ಅಳಿವು–ಉಳಿವಿನ ಪ್ರಶ್ನೆಯಾಗಿಯೂ ಕಾಡುತ್ತದೆ.

'ಫ್ಯಾಷನ್ ಜಗತ್ತಿನಲ್ಲಿ ಆಂಗ್ಲೊ–ದೇಸಿ ಉಡುಗೆ ಹೊಸ ಟ್ರೆಂಡ್. ಬಟ್ಟೆಯಲ್ಲಿ ಪಾಶ್ಚಾತ್ಯ ಮಾದರಿಯನ್ನು ಬ್ಲೆಂಡ್ ಮಾಡಿ ನಮ್ಮ ಸಂಸ್ಕೃತಿಯೊಂದಿಗೆ ತಳುಕು ಹಾಕಿದಾಗ ಅಲ್ಲಿ ಹೊಸದೊಂದು ಫ್ಯಾಷನ್ ಸೃಷ್ಟಿಯಾಗುತ್ತದೆ. ಜೊತೆಗೆ ಒಂದೇ ರೀತಿಯ ಉಡುಗೆಯನ್ನು ನೋಡಿ, ಧರಿಸಿ ಉಂಟಾಗುವ ಏಕತಾನತೆಯನ್ನೂ ಇಂಥ ಟ್ರೆಂಡಿ ಉಡುಗೆಗಳು ಮರೆಸುತ್ತವೆ. ಈ ನಿಟ್ಟಿನಲ್ಲಿ ಆಂಗ್ಲೊ–ದೇಸಿ ಉಡುಗೆ ಫ್ಯಾಷನ್ ಜಗತ್ತಿಗೆ ನೀಡಿದ ವಿನೂತನ ಕೊಡುಗೆ ಎಂದೇ ಹೇಳಬಹುದು' ಎನ್ನುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಫ್ಯಾಷನ್ ಡಿಸೈನರ್ ಫಾತಿಮಾ ಉಮರ್.

'ಹೊಸ ಟ್ರೆಂಡ್‌ಗೆ ತಕ್ಕಂತೆ ಉಡುಗೆ ನೀಡುವುದರಲ್ಲಿ ನಾನು ಸದಾ ಆಸಕ್ತಿ ವಹಿಸುತ್ತೇನೆ. ಆಧುನಿಕ ಮನೋಭಾವದ ಗ್ರಾಹಕರೂ ಇಂಥದ್ದನ್ನೇ ಅಪೇಕ್ಷೆ ಪಡುತ್ತಾರೆ' ಎನ್ನುವುದು ಅವರ ನಿಲುವು. ■